ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಸಚಿವಾಲಯ ನೌಕರರಿಗೆ ಒಂದೇ ಇಲಾಖೆಯಲ್ಲಿ ಗರಿಷ್ಠ ಸೇವೆಯನ್ನು ನಿಗಧಿ ಪಡಿಸುವ ಬಗ್ಗೆ

ಶ್ರೀ ಎಂ. ಪಿ. ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

556 (643) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಿಂದ ಒಂದೇ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಚಿವಾಲಯದ ನೌಕರರುಗಳ ಸಂಖ್ಯೆ ಎಷ್ಟು; ಒಂದೇ ಇಲಾಖೆಯಲ್ಲಿ ಕಾರ್ಯನಿರ್ವಹಿಸುವುದಕ್ಕೆ ಕಾರಣಗಳೇನು; (ವಿವರ ನೀಡುವುದು)

(ಆ) `ಡಿ' ಗ್ರೂಪ್, ಕಿರಿಯ ಸಹಾಯಕ ಮತ್ತು ಮೇಲ್ಪಟ್ಟ ಹುದ್ದೆಗಳಿಂದ ಬಡ್ತಿ ಪಡೆದ ನಂತರವು ಅದೇ ಇಲಾಖೆಯಲ್ಲಿ ಮುಂದುವರೆಯುತ್ತಿರುವ ನೌಕರರ ಸಂಖ್ಯೆ ಎಷ್ಟು; ಇದಕ್ಕೆ ಕಾರಣಗಳೇನು; (ವಿವರ ನೀಡುವುದು)

(ಇ) ಸಚಿವಾಲಯದ ನೌಕರರುಗಳಿಗೆ ಗರಿಷ್ಠ ಮೂರು ವರ್ಷ ತುಂಬಿದ ನಂತರ ಆಯಾ ಇಲಾಖೆಯಿಂದ ಬೇರೆ ಇಲಾಖೆಗೆ ಕಡ್ಡಾಯ ವರ್ಗಾವಣೆ ಮಾಡಲು ಇರುವ ತೊಡಕುಗಳೇನು? (ವಿವರ ನೀಡುವುದು)